# ಒಮ್ಮೆ ಅತ್ತೇ ಬಿಟ್ಟಿದ್ದೆ!



ನಾಗನಿಧಿ ಗೌಡ
ಕಲರ್ಸ್ ಕನ್ನಡಸ 'ಸಿಲ್ಲಿ ಲಲ್ಲಿ'ಯ ಎನ್‌ಎಂಎಲ್

◆ **ನಿಮ್ಮ ಬಹು ನಾಮಗಳ ವಿಶೇಷ ಏನು?**

ನನಗೆ ಮನೆಯಲ್ಲಿ ಇಟ್ಟಿರುವ ಹೆಸರು ನಾಗನಿಧಿ. ಶಾಲೆಯಲ್ಲಿ ಅದು ನಾಗರತ್ನಾ ಎಂದು ಬದಲಾಯಿತು. ಮನೆಯಲ್ಲಿ ಪೆಟ್‌ನೇಮ್ ಚಿನ್ನು–ಚಿನ್ನಿ. ನಾಗರತ್ನ ಮತ್ತು ಚಿನ್ನು ಎಂಬ ಎರಡು ನಾಮಗಳ ಸಮಾಸ ಮಾಡಿ ರತ್ನಚಿನ್ಮಯಿ ಎನ್ನುವ ರೂಪವನ್ನು ರಂಗಭೂಮಿ ನನಗೆ ದಯಪಾಲಿಸಿದೆ. ಅದೇ ಹೆಸರಿನಲ್ಲಿ ನನ್ನ ಫೇಸ್‌ಬುಕ್ ಅಕೌಂಟ್ ಮಾಡಿಕೊಂಡಿದ್ದೇನೆ. ಮೂಲ ಹೆಸರು ಮಾತ್ರ ನಾಗನಿಧಿ, ಅದನ್ನೇ ನಮ್ಮ ಮನೆಯಲ್ಲಿ ಹೇಳುವುದು. ಪಾತ್ರದಲ್ಲಿ ಎನ್‌ಎಂಎಲ್ ಎಂಬ ಸಂಕೇತಾಕ್ಷರದಲ್ಲಿ ಗುರುತಿಸಿಕೊಳ್ಳುತ್ತಿದ್ದೇನೆ. ಅದರ ಪೂರ್ಣ ರೂಪ ನರ್ಸ್ ಮೇಡ್ ಲಲಿತಾ. ವೈದ್ಯರ ಪತ್ನಿ ಹೆಸರೂ ಲಲಿತಾ ಎಂದಿರುವುದರಿಂದ ನನ್ನ ಹೆಸರನ್ನು ಎನ್‌ಎಂಎಲ್ ಎಂದು ಸಂಕ್ಷೇಪಿಸಲಾಗಿದೆ.

◆ **ಹಳೆಯ ಎನ್‌ಎಂಎಲ್ ನಿಮಗೆ ಹೇಗೆ ಸವಾಲು ಎಂದು ಅನ್ನಿಸುತ್ತದೆ?**

ಸವಾಲು ಎನ್ನುವುದಕ್ಕಿಂತ ಅದನ್ನು ನೋಡಿ ಕಲಿಯಲು ಸಾಧ್ಯವಾಗಿದೆ. ಒಂದು ರೀತಿಯಲ್ಲಿ ಮಾರ್ಗದರ್ಶಿಯಾಗಿದೆ. ಈ ಪಾತ್ರಕ್ಕೆ ನೇರವಾಗಿ ಸ್ಕ್ರೀನ್ ಟೆಸ್ಟ್‌ಗೆ ಕರೆದಿದ್ದರು. ಆಡಿಷನ್ ಮಾಡಿರಲಿಲ್ಲ. ಅದರಲ್ಲೂ ಎನ್‌ಎಂಎಲ್ ಪಾತ್ರಕ್ಕೆ ನನ್ನೊಬ್ಬಳನ್ನೇ ಆಯ್ಕೆ ಮಾಡಿದ್ದರು. ಅಂದು ಹುಷಾರಿಲ್ಲದ ಕಾರಣ ನನಗೆ ಬರಲು ಆಗಲಿಲ್ಲ. ಬೇರೊಂದು ದಿನ ಬರಲು ಸೂಚಿಸಿದರು, ನನ್ನನ್ನೇ ಆಯ್ಕೆ ಮಾಡಿದರು. ಅದಾದ ಮೇಲೆ ಒಂದು ಪುಟ್ಟ ಕಾರ್ಯಾಗಾರವನ್ನು ಚಂದ್ರು ಸರ್ ಮಾಡಿದರು. ನಿಮ್ಮ ಪಾತ್ರ ಹೀಗಿದೆ ಯೂಟ್ಯೂಬ್‌ನಲ್ಲಿ ಎಲ್ಲ ಸಿಗುತ್ತವೆ ನೋಡಿ ಎಂದು ಹೇಳಿದರು. ತುಂಬ ಚಿಕ್ಕವಳಿದ್ದಾಗ 'ಸಿಲ್ಲಿ ಲಲ್ಲಿ' ಬರ್ತಾ ಇತ್ತು, ಆಗ ಅದನ್ನು ನೋಡಿದ್ದೆ. 'ಸಿಲ್ಲಿ ಲಲ್ಲಿ... ಸಿಲ್ಲಿ ಲಲ್ಲಿ... ವಾವ್ ವಾವ್' ಹಾಡು ಬಿಟ್ಟರೆ ಬೇರೆ ಇನ್ನೇನಿದೆ ಎನ್ನುವುದು ಗೊತ್ತಿರಲಿಲ್ಲ. ಆಮೇಲೆ ಕನ್ನಡಿ ಮುಂದೆ ನಿಂತು ಹಳೆಯ ನರ್ಸ್ ಪಾತ್ರವನ್ನು ಅನುಕರಿಸಲು ಆರಂಭಿಸಿದೆ. ಆಕೆಯ ಮಾತೇ ವಿಚಿತ್ರ. ದನಿಯನ್ನು ಎಳೆದು ಮಾತನಾಡುತ್ತಾಳೆ. ಅದನ್ನು ನಾನು ರೂಢಿಮಾಡಿಕೊಳ್ಳಬೇಕಿತ್ತು. ಒಂದು ದಿನ ನಿದ್ದೆಯನ್ನೇ ಮಾಡದೆ ಅದನ್ನು ಕಲಿಯುವ ತಾಲೀಮು ಮಾಡಿದ್ದೆ. ಈಗ ಅದರ ಪ್ರಭಾವ ಹೇಗಾಗಿದೆ ಎಂದರೆ ಸಹಜವಾಗಿ ಬೇರೆಯವರ ಜತೆ ಮಾತನಾಡುವಾಗ ಕೂಡ ನುಲಿದು ಬಿಡುತ್ತೇನೆ. ನರ್ಸ್ ಮೇಡ್ ಲಲಿತಾ ಅನ್ನೋದಕ್ಕಿಂತ ನುಲಿದಾಡೊ ಲಲಿತಾ ಆಗಿಬಿಟ್ಟಿದ್ದೇನೆ. ಮನೆಯಲ್ಲಿ ಕೆಲವೊಮ್ಮೆ ಇನ್ನೂ ಪಾತ್ರದಲ್ಲಿಯೇ ಇದ್ದೀಯಲ್ಲ ಎನ್ನುತ್ತಾರೆ. ಹಳೆ ಪಾತ್ರವನ್ನು ನೋಡಿ ನೋಡಿ ಕಲಿತಿದ್ದೇನೆ. ಪಾತ್ರಕ್ಕೆ ನಮ್ಮನ್ನು ಸಿದ್ಧಪಡಿಸಲು ಕಾರ್ಯಾಗಾರವನ್ನೂ ಮಾಡಿದ್ದಾರೆ.

◆ **ನಗುವ ಸನ್ನಿವೇಶ ಇರದಿದ್ದರೂ ಕೃತಕವಾಗಿ ನಗುವ ಸ್ವಾರಸ್ಯ ಏನು?**

ಕೆಲವೊಂದು ಸಲ ನಗು ಇಲ್ಲದಿದ್ದರೂ ನಾವು ನಗುತ್ತೇವೆ ಅಂದರೆ ಅದು ವೀಕ್ಷಕರನ್ನು ನಗಿಸುವ ಉದ್ದೇಶ. ನಾವು ನಗುತ್ತೇವೆ ಅಂದರೆ, ಅದರಲ್ಲಿ ಏನೋ ಕಾಮಿಡಿ ಇದೆ ಎಂದು ಜನರೂ ನಗುತ್ತಾರೆ. ಸಹಜ ಹಾಸ್ಯದಲ್ಲಿ ಪಂಚಿಂಗ್ ಇರಬೇಕು. ನಾನು ಒಮ್ಮೆ ಅತ್ತೇ ಬಿಟ್ಟಿದ್ದೆ. ಏಕೆಂದರೆ ನನಗೆ ಹಾಸ್ಯ ಮಾಡಿ ಅಭ್ಯಾಸವೇ ಇಲ್ಲ. ನಾನು ಮಾಡಿದ್ದು ಅವರಿಗೆ ಹಾಸ್ಯ ಅನ್ನಿಸುತ್ತಿಲ್ಲ ಏನು ಮಾಡಲಿ ಎಂದು. ಆಗ ಚಂದ್ರು ಸರ್ 'ಯಾರೂ ಹಾಸ್ಯ ನಟರು ಎಂದು ಇರುವುದಿಲ್ಲ. ನಮ್ಮಲ್ಲಿ ಇರುವ ಪ್ರತಿಭೆಯನ್ನು ತೋರಿಸಬೇಕು. ನಿಮ್ಮಲ್ಲಿ ಆ ಸಾಮರ್ಥ್ಯ ಇದೆ ಎಂದೇ ಆಯ್ಕೆ ಮಾಡಿಕೊಂಡಿರುತ್ತೇವೆ' ಎಂದು ಸಮಾಧಾನ ಮಾಡಿದರು. ನನಗೆ ಸ್ವಲ್ಪ ಹೊತ್ತು ವಿರಾಮ ಬಿಟ್ಟರು ಆಮೇಲೆ ಸರಿಯಾಯಿತು.

◆ **ನಟಿಯಾದ ಸಂದರ್ಭವನ್ನು ಹೇಳಿ.**

ನನ್ನನ್ನು ಪ್ರೋತ್ಸಾಹಿಸಿದ್ದು ಅಮ್ಮ (ಗೌರಿ). ನಮ್ಮ ಮನೆಯಲ್ಲಿ ಗಂಡಸರು ಯಾರೂ ಇಲ್ಲ. ಚಿಕ್ಕವಳಿದ್ದಾಗಲೇ ತಂದೆಯನ್ನು ಕಳೆದುಕೊಂಡಿದ್ದೆ. ನನ್ನ ಅಪ್ಪ ನರಸೇಗೌಡರು ಯಕ್ಷಗಾನ ಕಲಾವಿದರು. ನಮ್ಮ ವಂಶದಲ್ಲಿ ಚಿಕ್ಕಪ್ಪ, ದೊಡ್ಡಪ್ಪ ಎಲ್ಲರೂ ಯಕ್ಷಗಾನ ಕಲಾವಿದರು. ನಮ್ಮೂರು ಹೊನ್ನಾವರ ಬಳಿಯ ಕಾಸರಕೋಡ್. ಅಮ್ಮನೇ ನನ್ನನ್ನು ನನ್ನನ್ನು ಅಕ್ಕ(ಮಾಲತಿ)ನನ್ನು ಬೆಳೆಸಿದರು. ಆಕೆ 'ಕ್ಷಮಾ'ದಲ್ಲಿ ನಟಿಸುತ್ತಿದ್ದಾಳೆ. ನನ್ನ ತಂದೆಗೆ ಮಕ್ಕಳಿಬ್ಬರೂ ಯಕ್ಷಗಾನ ಕಲಾವಿದರು ಆಗಬೇಕು ಎನ್ನುವ ಆಸೆ ಇತ್ತಂತೆ. ಯಕ್ಷಗಾನ ಪ್ರಸಂಗ ಸೇರಲು ಹೇಳಿದರು. ನಾನೂ ಕೆಲವೊಂದು ಆಟ ಆಡಿದ್ದೇನೆ. ನನಗೆ ನಟಿಯಾಗಬೇಕು ಎನ್ನುವ ಬಯಕೆ. ಸಾಣೇಹಳ್ಳಿ ರಂಗ ಶಾಲೆಗೆ ಅರ್ಜಿ ಹಾಕಿದೆ. ನೂರು ಮಂದಿ ಅಭ್ಯರ್ಥಿಗಳಲ್ಲಿ 15 ಮಂದಿಯನ್ನು ಆಯ್ಕೆ ಮಾಡಿಕೊಂಡರು. ಅಲ್ಲಿ ಕಥಕ್ಕಳಿ, ಸಮಕಾಲೀನ ನೃತ್ಯ, ನಾಟಕ, ಯಕ್ಷಗಾನ, ಕಳಾರಿ ಫೈಟ್ ಎಲ್ಲವನ್ನು ಕಲಿಸುತ್ತಾರೆ. ಅಲ್ಲಿಂದ ನಿಧಾನಕ್ಕೆ ಬೆಂಗಳೂರಿಗೆ ಬಂದೆ. ರವೀಂದ್ರ ಕಲಾ ಕ್ಷೇತ್ರಕ್ಕೆ ಭೇಟಿ ನೀಡಿದೆ. ಅಲ್ಲಿ ನಾಟ್ಯಯೋಗ, ರೂಪಾಂತರ, ಅನೇಕ ಎಂಬ ರಂಗ ತಂಡಗಳ ಹಲವು ನಾಟಕ ಆಡಿದೆ. ರಂಗ ಚಟುವಟಿಕೆಯ ಜೊತೆ ಆಡಿಷನ್ ನೀಡ್ತಾ ಬಂದೆ. ಸಿನಿಮಾ– ಸೀರಿಯಲ್‌ಗಳಲ್ಲಿ ಅವಕಾಶ ಸಿಗ್ತಾ ಬಂದವು.

◆ **ನಿಮ್ಮ ಬೆಸ್ಟ್ ಪಾತ್ರ ಯಾವುದು?**

ನನಗೆ ವೈಯಕ್ತಿಕವಾಗಿ ನಾಟಕ ತುಂಬ ಖುಷಿ ಕೊಡುತ್ತದೆ. ರಂಗಭೂಮಿಯಲ್ಲಿ ನಟನೆ ಲೈವ್ ಇರುತ್ತದೆ. ಪ್ರೇಕ್ಷಕರು ಕೂಡ ಲೈವ್ ನಟನೆಯನ್ನು ಮೆಚ್ಚಿ ಆ ಕೂಡಲೇ ಕಾಂಪ್ಲಿಮೆಂಟ್ ಕೊಡುತ್ತಾರೆ. ನಮ್ಮ ಶ್ರಮಕ್ಕೆ ಫಲ ಅಲ್ಲೇ ಸಿಗುತ್ತದೆ. ಪ್ರತಿ ಆಟವೂ ಹೊಸದಾಗಿ ಇರುತ್ತದೆ. ಸಿನಿಮಾ– ಸೀರಿಯಲ್ ಆದರೆ ನಮ್ಮನ್ನು ಗುರುತಿಸಿದರೆ ಖುಷಿ. ಲೈವ್ ಆಗಿ ನೋಡದಿದ್ದರೂ ಪ್ರಶಂಸಿಸುವುದು ಸಂತೋಷ ಕೊಡುತ್ತದೆ. ನನಗೆ ಅತ್ಯಂತ ಖುಷಿ ಕೊಟ್ಟದ್ದು 'ವೆಂಕಟ ಇನ್ ಸಂಕಟ' ಎಂಬ ನಾಟಕದ ರೀಟಾ ಪಾತ್ರ. ನಟನೆ ಎಂದು ಬಂದಾಗ ಎಲ್ಲದೂ ಚೆಂದವೇ. ಅದೇ ನನ್ನ ವೃತ್ತಿ. ನನಗೆ ಯಾವ ಪಾತ್ರವಾದರೂ ಸರಿ. ಕಾಮಿಡಿ ಮೊದಲು ಇಷ್ಟ ಇರಲಿಲ್ಲ ಈಗ ಅದೂ ಸರಿಯಾಗಿದೆ. ಕಾಮಿಡಿಯಲ್ಲಿ ಸಮಯಕ್ಕೆ ಸರಿಯಾಗಿ ಪಂಚ್ ಹೊಡೆಯಬೇಕು. ವೀಕ್ಷಕರನ್ನು ನಗಿಸಲು ಯತ್ನಿಸಬೇಕು.

◆ **ಬೆಂಗಳೂರಿನ ಅನುಭವ ಹೇಳುವುದಾದರೆ...**

ಎಲ್ಲದೂ ಹೊಸತು. ಇಲ್ಲಿ ನನ್ನವರೂ ಯಾರು ಇರಲಿಲ್ಲ. 'ಪಾರು'ನಲ್ಲಿ ನಟಿಸುತ್ತಿರುವ ಸಿತಾರಾ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಬಂದರು. ಇಬ್ಬರೂ ಜೊತೆಗೆ ಇದ್ದೆವು. ಅವರು ಆಡುತ್ತಿದ್ದ ರಂಗ ತಂಡಗಳಲ್ಲಿಯೇ ನನ್ನನ್ನು ಪರಿಚಯಿಸಿದರು. ಅವರು ನನಗೆ ಸಾಣೆಹಳ್ಳಿಗೆ ಡಾನ್ಸ್ ಕಲಿಸಲು ಬಂದಿದ್ದರು. ನನಗೆ ಆಡಿಷನ್ ಕೊಡುವುದು ಏನೂ ಗೊತ್ತಿರಲಿಲ್ಲ. ಊರಿಗೆ ಹೋಗಿ ಯಕ್ಷಗಾನ ತಂಡಕ್ಕೆ ಸೇರಬೇಕು ಅಂದುಕೊಂಡೆ. ಆದರೆ ಅವಕಾಶ ಎನ್ನುವುದು ನಾನು ಅಂದುಕೊಂಡಿದ್ದನ್ನು ಬದಲಿಸಿ ಒಬ್ಬ ನಟಿಯಾದೆ. ಆರಂಭದ ದಿನಗಳಿಂದಲೂ ನನಗೆ ಇಲ್ಲಿ ಯಾವ ಸಮಸ್ಯೆಯೂ ಆಗಲಿಲ್ಲ. ಸುಖವಾಗಿದ್ದೇನೆ.

■ ರಾಘವೇಂದ್ರ ಕೆ.